10.20 ಎ.ಎಂ.

ಇಲ್ಲದಂತಾಗಿದೆ. ಅಧಿಕಾರಿಗಳಿಗೆ ರಕ್ಷಣೆ, ಲೂಟಿ ಮಾಡುತ್ತಿರುವಂತಹ ವ್ಯಕ್ತಿಗಳಿಗೆ ಸಾಕಷ್ಟು ರಕ್ಷಣೆ ಸಿಗುತ್ತಿದೆ. ಅದಕ್ಕೋಸ್ಕರ ನಾನು ಸರ್ಕಾರದವರಲ್ಲಿ ಒತ್ತಾಯ ಮಾಡುವುದು ಇಷ್ಟೆ, ಕನಿಷ್ಟ ಒಂದು ವಾರದಲ್ಲಿಯಾದರೂ ಕೂಡ ತಾವು ಎಷ್ಟು ಜನಕ್ಕೆ ಕೇಸ್ ಹಾಕಿದ್ದೀರಿ? ಎಷ್ಟು ಜನರನ್ನು ಜೈಲಿಗೆ ಹಾಕಿದ್ದೀರಿ? ಅದೇರೀತಿ ಅಧಿಕಾರಿಗಳ ಮೇಲೆ ಎಷ್ಟೆಷ್ಟು ಆ್ಯಕ್ಷನ್ ತೆಗೆದುಕೊಂಡಿದ್ದೀರಿ ಎಂಬುದನ್ನು ಸ್ಪಷ್ಟಮಾಡಿದರೆ ಈ ಸದನ ಮುಂದಿನ ವಾರದಲ್ಲಿ ಸೇರಿದಾಗ ತಿಳಿಸಿದರೆ, ನಿಮ್ಮ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ ಎಂದು ಅನ್ನಿಸುತ್ತದೆ. ಇಲ್ಲದೆ ಇದ್ದರೆ ಅನೇಕ ವರ್ಷಗಳಿಂದ ನಡೆದಿದೆ, ಇದು ಹೀಗೆ ಮುಂದುವರೆಯುತ್ತದೆ ಎಂದು ಈ ಸಬ್ಜೆಕ್ಟ್ ಅನ್ನು ಹೀಗೆ ರೈಟ್ ಮಾಡಿಕೊಂಡು, ನಮ್ಮ ಮೇಲೆ ಯಾರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಭಾವನೆ ಬರುತ್ತದೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೇ, ಅದಕ್ಕೆ ಒಂದು ಪ್ರತ್ಯೇಕವಾದ ಸಮಯವನ್ನು ಗುರುತಿಸಿದರೆ ಅದಕ್ಕೆ ಬೇಕಾದರೆ ನಾನು ಮಾಹಿತಿಯನ್ನು ಪಡೆದು ಚರ್ಚೆ ಮಾಡಬಹುದು.

ರಾಜ್ಯದಲ್ಲಿ ಮಹಿಳಾ ಸಹಕಾರ ಸಂಘಗಳನ್ನು ಪ್ರಾರಂಭಿಸುವುದು.

46(440) ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಮಹಿಳೆಯರಿಗಾಗಿ ಇರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ಆ) ಮಹಿಳೆಯರ ಹೆಸರಿನಲ್ಲಿ ಪುರುಷರೇ ಅವುಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗೆಗೆ ಸರ್ಕಾರವು ತೆಗೆದುಕೊಂಡ ಕ್ರಮಗಳು ಯಾವುವು?

ಈ) ರಾಯಚೂರು ಜಿಲ್ಲೆಯಲ್ಲಿ ಬರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು? ಹಾಗೂ ಇನ್ನೂ ಸ್ಥಾಪಿಸಲು ಉದ್ದೇಶಿಸಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ಉ) ಅವು ಲಾಭದಾಯಕವಾಗಿ ನಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ರಾಜ್ಯದಲ್ಲಿ 31-3-1998 ರ ಅಂತ್ಯಕ್ಕೆ 826 ಮಹಿಳಾ ಸಹಕಾರ ಸಂಘಗಳಿರುತ್ತವೆ.

ಆ) -ಇಲ-

ಇ) ಉದ್ಭವಿಸುವುದಿಲ್ಲ.

ಈ) ರಾಯಚೂರು ಜಿಲ್ಲೆಯಲ್ಲಿ 41 ಮಹಿಳಾ ಸಹಕಾರ ಸಂಘಗಳ ಇರುತ್ತವೆ. ಈ ಸದ್ಯ ಯಾವುದೇ ಪ್ರಸ್ತಾವನೆಯು ನೋಂದಣಿಗಾಗಿ ಬಾಕಿ ಇರುವುದಿಲ್ಲ.

ಉ) ಬಂದಿದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ :— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಮಹಿಳೆಯರಿಗಾಗಿ ಇರುವಂತಹ ಸಹಕಾರ ಸಂಘಗಳು ಲಾಭದಾಯಕವಾಗಿ ನಡೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಬಂದಿದೆ ಎಂದು ಹೇಳುತ್ತಾರೆ. ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ದಯವಿಟ್ಟು ತಿಳಿಸಬೇಕು. ಏಕೆಂದರೆ ಮಹಿಳೆಯರು ಬಹಳಷ್ಟು ಜನ ನಡೆಸುತ್ತಿರುವುದನ್ನು ಪುರುಷರು ವಹಿಸಿಕೊಂಡಿರುತ್ತಾರೆ. ಅದಕ್ಕೆ ಹಲವಾರು ಕಾರಣಗಳಿರಬಹುದು. ತಾವು ಸಂಬಂಧಪಟ್ಟ ಮಂತ್ರಿಗಳಾಗಿ ಅದರ ಬಗ್ಗೆ ತಿಳಿದುಕೊಂಡಿದ್ದೀರಾ? ತಾವು ತಿಳಿದುಕೊಂಡಿದ್ದರೂ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದೀರಿ. ತಮ್ಮ ಗಮನಕ್ಕೆ ಬಂದಿರುತ್ತದೆ, ಆದರೆ ತಾವು ಹೇಳುತ್ತಿಲ್ಲ ಅದಕ್ಕೆ ಏನಾದರೂ ಪರಿಹಾರ ಕಂಡುಕೊಂಡಿದ್ದೀರಾ?

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಅವರ ಪ್ರಶ್ನೆ ಮಹಿಳೆಯರು ನಡೆಸತಕ್ಕಂಥ ಸಹಕಾರ ಸಂಘಗಳು ಏನಿವೆ ಅವುಗಳನ್ನು ಪುರುಷರು ನಡೆಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತಿದ್ದಾರೆ. ಪುರುಷರು ಏನು ನಡೆಸುತ್ತಾರೆ ಅದನ್ನು ತಾವೇ ಮಹಿಳೆಯರು, ಪುರುಷರು ನಡೆಸುವುದಕ್ಕೆ ಬಿಡಬೇಡಿ ಎಂದು ಹೇಳಬೇಕು. ನಾವು ಕೊಟ್ಟಿರುವುದು ಮಹಿಳೆಯರು ನಡೆಸಲಿ ಎನ್ನುವ ದೃಷ್ಟಿಯಿಂದ, ನಮಗೆ ತಿಳಿದಮಟ್ಟಿಗೆ ಮಹಿಳೆಯರೇ ನಡೆಸುತ್ತಾರೆ. ಎಲ್ಲಾದರೂ ಅಂತಹ ಪ್ರಕರಣಗಳು ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅಂತಹ ಸಂಘಗಳನ್ನು ಲಿಕ್ವಿಡೇಟ್ ಮಾಡುತ್ತೇನೆ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ :— ಅವುಗಳು ಲಾಭದಾಯಕವಾಗಿ ನಡೆಯುತ್ತಿಲ್ಲ ಎಂದು ತಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ತಾವು ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಲಾಭದಾಯಕವಾಗಿ ನಡೆಯದೆ ಇರುವಂತಹ ಸಂಘಗಳಿಗೆ ಪ್ರೋತ್ಸಾಹದಾಯಕವಾಗಿ ಅವರಿಗೆ ದಾಕ್ರಾ ಯೋಜನೆಯಡಿ ಸೌಲಭ್ಯ ಮಾಡಿದ್ದೇವೆ.

ಹಾಗೂ ಮಹಿಳೆಯರಿಗೆ ಈ ಹೈನು ದನಗಳನ್ನು ಕೊಡಿಸುವ ಎಲ್ಲಾ ವ್ಯವಸ್ಥೆ ಮಾಡಿ ಅವುಗಳನ್ನು ಲಾಭದಾಯಕವಾಗಿ ಬರುವ ಹಾಗೆ ಮಾಡುತ್ತಿದ್ದೇನೆ. ಅದರೂ ಕೂಡ ಮಹಿಳೆಯರು ಮುಂದೆ ಬಂದು ಸ್ವಂತ ಶಕ್ತಿಯಿಂದ ಮಾಡಬೇಕಾಗುತ್ತದೆ.

ತೋಟಗಾರಿಕೆ ಇಲಾಖೆಯ ದಿನಗೂಲಿ ನೌಕರರಿಗೆ ಜೀವನ ನಿರ್ವಹಣಾ ಭತ್ಯೆ.

47(435) ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರುಗಳಿಗೆ ಜೀವನ ನಿರ್ವಹಣಾ ಭತ್ಯೆಯನ್ನು ನೀಡದಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಇತರೆ ಇಲಾಖೆಗಳ ದಿನಗೂಲಿ ನೌಕರುಗಳಿಗೆ ಜೀವನ ನಿರ್ವಹಣಾ ಭತ್ಯೆ ನೀಡುತ್ತಿದ್ದರೂ ತೋಟಗಾರಿಕೆ ಇಲಾಖೆಯ ನೌಕರರುಗಳಿಗೆ ಜೀವನ ನಿರ್ವಹಣಾ ಭತ್ಯೆ ನೀಡದಿರಲು ಕಾರಣವೇನು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ಹೌದು.

ಆ) ದಿನಾಂಕ: 28-3-94ರ ಅಧಿಸೂಚನೆ ಸಂಖ್ಯೆ ಸಕಾ 8, ಎಲ್‌ಎಂಡಬ್ಲ್ಯೂ 90ರ ಪ್ರಕಾರ ಜೀವನ ನಿರ್ವಹಣಾ ಭತ್ಯೆಯನ್ನು ನೀಡಲು ಅವಕಾಶ ಇರುವುದಿಲ್ಲ. ಆದ್ದರಿಂದ ತೋಟಗಾರಿಕೆ ಇಲಾಖೆಯಲ್ಲಿ ನೀಡಲಾಗುತ್ತಿದ್ದ ಜೀವನ ನಿರ್ವಹಣಾ ಭತ್ಯೆಯನ್ನು ದಿನಾಂಕ: 1-4-98 ರಿಂದ ಹಿಂದಕ್ಕೆ ತೆಗೆದುಕೊಳ್ಳಲಾಗಿದೆ. ಈಗಿರುವ ಕನಿಷ್ಠ ದಿನಗೂಲಿಯಾದ ದಿನಕ್ಕೆ 25-00 ರೂ.ಗಳನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಶ್ರೀ ಸಿ.ಎಂ. ಲಿಂಗಪ್ಪ :— ಮಾನ್ಯ ಅಧ್ಯಕ್ಷರೇ, ತೋಟಗಾರಿಕೆ ಇಲಾಖೆಯಲ್ಲಿ ದಿನಗೂಲಿ ನೌಕರರನ್ನು ನೇಮಕಮಾಡಿಕೊಳ್ಳಲಾಗಿತ್ತು. ಈ ಮಧ್ಯದಲ್ಲಿ ಜೀವನ ನಿರ್ವಹಣಾ ವೆಚ್ಚವನ್ನು ಅವರಿಗೆ ಕೊಡುತ್ತಿದ್ದರು. ಆದರೆ ದಿನಾಂಕ: 1-4-98 ರಿಂದ ಅದನ್ನು ನಿಲ್ಲಿಸಿದ್ದೀರಿ. ಅವರಿಗೆ ಕೊಡುತ್ತಿರುವಂತಹ ದಿನಗೂಲಿ 26 ರೂಪಾಯಿ ತೆಗೆದುಕೊಂಡು ಒಬ್ಬ ದಿನಗೂಲಿ ನೌಕರ ಜೀವನ ನಿರ್ವಹಣೆ ಮಾಡುವುದಕ್ಕಾಗುತ್ತದೆಯೇ ಎಂದು ಕೇಳುತ್ತಿದ್ದೇನೆ. ಅವನು ಒಬ್ಬನಿಗೆ ಅದು ಸಾಲುವುದಿಲ್ಲ. ಅವನ ಮನೆಯಲ್ಲಿ ಹೆಂಡತಿ, ಮಕ್ಕಳು ಏನು ಮಾಡಬೇಕು? ಆ ಬಗ್ಗೆ ಸ್ಪಷ್ಟವಾದಂತಹ ಭರವಸೆ ಕೊಡಬೇಕು.